# ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ

## ಬಹು ಆಯ್ಕೆ ಆಧಾರಿತ ಮಾದರಿ ಪ್ರಶ್ನೆ ಪತ್ರಿಕೆ–1

**ವಿಷಯ : ಸಮಾಜ ವಿಜ್ಞಾನ** **ಮಾದರಿ ಉತ್ತರಗಳು** **ವಿಷಯ ಸಂಕೇತ: 85K**

**2020–21** **ಗರಿಷ್ಠ ಅಂಕಗಳು: 40**

**I. ಈ ಪ್ರತಿಯೊಂದು ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ನಿಮಗೆ ನೀಡಿರುವ ಓ.ಎಂ.ಆರ್ ನಲ್ಲಿ ಸರಿಯಾದ ಆಯ್ಕೆಯನ್ನು ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್ ನಿಂದ ಶೇಡ್ ಮಾಡಿರಿ. 40X1=40**

1. ಫ್ರಾನ್ಸಿಸ್ಕೊ ಡಿ ಅಲ್ಮೇಡಾ ಜಾರಿಗೆ ತಂದ ನೀತಿ

   **ಎ) ನೀಲಿ ನೀರಿನ ನೀತಿ** ಬಿ) ಸಂಧಾನ ಮತ್ತು ಯುದ್ಧ ಗಳ ಮಾರ್ಗ ನೀತಿ

   ಸಿ) ಒಡೆದು ಆಳುವ ನೀತಿ ಡಿ) ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ

2. 'ಸಲ್ಬಾಯ್ ಒಪ್ಪಂದ' ದೊಂದಿಗೆ ಅಂತ್ಯಗೊಂಡ ಯುದ್ಧ

   ಎ) ಮೊದಲನೇ ಆಂಗ್ಲೋ ಮೈಸೂರು ಯುದ್ಧ **ಬಿ) ಮೊದಲನೇ ಆಂಗ್ಲೋ ಮರಾಠ ಯುದ್ಧ**

   ಸಿ) ಮೊದಲನೇ ಆಂಗ್ಲೋ–ಸಿಖ್ ಯುದ್ಧ ಡಿ) ಮೊದಲನೇ ಕಾರ್ನಾಟಿಕ್ ಯುದ್ಧ

3. 'ಫೌಜದಾರಿ ಅದಾಲತ್' ಎಂಬುದು

   ಎ) ನಾಗರೀಕ ನ್ಯಾಯಾಲಯ ಬಿ) ಕಂದಾಯ ನ್ಯಾಯಾಲಯ

   **ಸಿ) ಅಪರಾಧ ನ್ಯಾಯಾಲಯ** ಡಿ) ಗ್ರಾಹಕ ನ್ಯಾಯಾಲಯ

4. ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧದ ಸಮಯದಲ್ಲಿ ಬ್ರಿಟಿಷ್ ಗವರ್ನರ್ ಜನರಲ್ ಆಗಿದ್ದವರು

   **ಎ) ವೆಲ್ಲೆಸ್ಲಿ** ಬಿ) ಡಾಲ್ ಹೌಸಿ

   ಸಿ) ಕಾರ್ನ್ ವಾಲೀಸ್ ಡಿ) ರಿಪ್ಪನ್

5. 'ವೇದಗಳಿಗೆ ಹಿಂತಿರುಗಿ' ಎಂದು ಕರೆ ನೀಡಿದ ಸಾಮಾಜಿಕ ಸುಧಾರಕ

   ಎ) ರಾಜಾ ರಾಮ ಮೋಹನ ರಾಯ್ ಬಿ) ಸ್ವಾಮಿ ವಿವೇಕಾನಂದ

   ಸಿ) ನಾರಾಯಣ ಗುರು **ಡಿ) ದಯಾನಂದ ಸರಸ್ವತಿ**

6. ಝಾನ್ಸಿಯ ರಾಣಿ ಲಕ್ಷ್ಮೀ ಬಾಯಿ ಬ್ರಿಟಿಷರ ವಿರುದ್ಧ ದಂಗೆ ಏಳಲು ಕಾರಣ

   ಎ) ಸಹಾಯಕ ಸೈನ್ಯ ಪದ್ಧತಿ ಬಿ) ಸಂಧಾನ ಮತ್ತು ಯುದ್ಧ ಗಳ ಮಾರ್ಗ ನೀತಿ

   ಸಿ) ಒಡೆದು ಆಳುವ ನೀತಿ **ಡಿ) ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ**

7. ರಾಸ್ ಬಿಹಾರಿ ಘೋಷ್ ಮತ್ತು ಮೇಡಮ್ ಕಾಮರವರು ಈ ಗುಂಪಿನ ನಾಯಕರು

**ಎ) ಕ್ರಾಂತಿಕಾರಿಗಳು** ಬಿ) ಮಂದಗಾಮಿಗಳು

ಸಿ) ತೀವ್ರಗಾಮಿಗಳು ಡಿ) ಉಗ್ರಗಾಮಿಗಳು

8. ಭಾರತೀಯ ರಾಷ್ಟ್ರೀಯ ಕಾಂಗ್ರೇಸ್ ನ ಸಂಸ್ಥಾಪಕರು

ಎ) ಮಹಾತ್ಮ ಗಾಂಧೀಜಿ **ಬಿ) ಎ.ಒ ಹ್ಯೂಮ್**

ಸಿ) ಬಾಲಗಂಗಾಧರ ತಿಲಕ್ ಡಿ) ಗೋಪಾಲಕೃಷ್ಣ ಗೋಖಲೆ

9. 'ಫಾರ್ವರ್ಡ್ ಬ್ಲಾಕ್' ನ್ನು ಸ್ಥಾಪಿಸಿದವರು

ಎ) ಜವಹಾರಲಾಲ್ ನೆಹರು **ಬಿ) ಸುಭಾಷ್ ಚಂದ್ರ ಬೋಸ್**

ಸಿ) ಡಾ.ಬಿ.ಆರ್ ಅಂಬೇಡ್ಕರ್ ಡಿ) ಬಾಲಗಂಗಾಧರ ತಿಲಕ

10. ಲಾಲಾ ಲಜಪತ್ ರಾಯ್ ಈ ಸಮಯದಲ್ಲಿ ಕೊಲ್ಲಲ್ಪಟ್ಟರು

ಎ) ಜಲಿಯಾನ್ ವಾಲಾಬಾಗ್ ಹತ್ಯಾಕಾಂಡ **ಬಿ) ಸೈಮನ್ ಆಯೋಗದ ವಿರುದ್ಧ ಪ್ರತಿಭಟನೆ ಮಾಡುವಾಗ**

ಸಿ) ಅಸಹಕಾರ ಚಳುವಳಿಯಲ್ಲಿ ಡಿ) ಉಪ್ಪಿನ ಸತ್ಯಾಗ್ರಹದಲ್ಲಿ

11. 'ಮಹಾದ್ ಕೆರೆ ಮತ್ತು ಕಲರಂ ದೇವಾಲಯದ ಆಂದೋಲನಗಳು' ಇದನ್ನು ಪ್ರತಿಭಟಿಸಲು ಆಯೋಜಿಸಲಾಗಿತ್ತು

**ಎ) ಅಸ್ಪೃಶ್ಯತೆಯ ಆಚರಣೆಯನ್ನು** ಬಿ) ವೇಲ್ಸ್ ನ ರಾಜಕುಮಾರನ ಭೇಟಿಯನ್ನು

ಸಿ) ಕ್ರಿಪ್ಸ್ ಮಿಷನ್ ನ ಪ್ರಸ್ತಾವನೆಯನ್ನು ಡಿ) ಗಾಂಧಿಯನ್ನು ದಂಡಿಯಲ್ಲಿ ಬಂಧಿಸುವುದನ್ನು

12. ಸಂವಿಧಾನದ 42ನೇ ತಿದ್ದುಪಡಿಯ ಮೂಲಕ ಪ್ರಸ್ತಾವನೆಯಲ್ಲಿ ಸೇರಿಸಲಾದ ಪದಗಳು

ಎ) ಗಣರಾಜ್ಯ ಮತ್ತು ಪ್ರಜಾಪ್ರಭುತ್ವ **ಬಿ) ಸಮಾಜವಾದಿ ಮತ್ತು ಜಾತ್ಯಾತೀತತೆ**

ಸಿ) ಸಾರ್ವಭೌಮತ್ವ ಮತ್ತು ಪ್ರಜಾಪ್ರಭುತ್ವ ಡಿ) ಪ್ರಾದೇಶಿಕ ಮತ್ತು ಜಾತ್ಯಾತೀತತೆ

13. ಚೆನ್ನಮ್ಮ ಬ್ರಿಟಿಷರ ವಿರುದ್ಧ ದಂಗೆ ಎದ್ದದ್ದು

ಎ) ಮೈಸೂರಿನಲ್ಲಿ **ಬಿ) ಕಿತ್ತೂರಿನಲ್ಲಿ**

ಸಿ) ಬೆಳಗಾವಿಯಲ್ಲಿ ಡಿ) ಚಿತ್ರದುರ್ಗದಲ್ಲಿ

14. ಲೋಕಪಾಲ ಮತ್ತು ಲೋಕಾಯುಕ್ತ ಸಂಸ್ಥೆಗಳನ್ನು ಸ್ಥಾಪಿಸಿರುವುದು

ಎ) ಪ್ರಾದೇಶಿಕ ಅಸಮತೋಲನ ತಡೆಯಲು **ಬಿ) ಭ್ರಷ್ಟಾಚಾರ ತಡೆಯಲು**

ಸಿ) ಕೋಮುವಾದ ತಡೆಯಲು ಡಿ) ಅಸ್ಪೃಶ್ಯತೆಯ ಆಚರಣೆಯನ್ನು ತಡೆಯಲು

15. ಭಾರತ ಸಂವಿಧಾನದ 51ನೇ ವಿಧಿಯ ಮೂಲ ಉದ್ದೇಶ

ಎ) ಉಚಿತ ಮತ್ತು ಕಡ್ಡಾಯ ಶಿಕ್ಷಣ ಕೊಡುವುದು

ಬಿ) ಏಕರೂಪದ ಪಂಚಾಯತ್ ಸಂಸ್ಥೆಗಳ ಸ್ಥಾಪನೆ

ಸಿ) ಸಾಮಾಜಿಕ ನ್ಯಾಯ ಮತ್ತು ಜನರ ಕಲ್ಯಾಣ

**ಡಿ) ಅಂತರರಾಷ್ಟ್ರೀಯ ಸಹಬಾಳ್ವೆ ಹಾಗೂ ಅಂತರರಾಷ್ಟ್ರೀಯ ಕಾನೂನಿಗೆ ಗೌರವ ನೀಡುವುದು**

16. 1966 ರಲ್ಲಿ ರಷ್ಯಾ, ತಾಷ್ಕೆಂಟ್ ಒಪ್ಪಂದಕ್ಕೆ ಸಹಕರಿಸಿದ್ದು

**ಎ) ಭಾರತ ಮತ್ತು ಪಾಕಿಸ್ತಾನದ ನಡುವೆ** ಬಿ) ಶ್ರೀಲಂಕ ಮತ್ತು ಪಾಕಿಸ್ತಾನದ ನಡುವೆ

ಸಿ) ಭಾರತ ಮತ್ತು ಚೀನಾದ ನಡುವೆ ಡಿ) ಬಾಂಗ್ಲಾದೇಶ ಮತ್ತು ಶ್ರೀಲಂಕ ನಡುವೆ

17. ಮಾನವ ಹಕ್ಕುಗಳ ಘೋಷಣೆಯನ್ನು ಅಂಗೀಕರಿಸಲಾಗಿದ್ದು

**ಎ) ಡಿಸೆಂಬರ್ 10, 1948ರಂದು** ಬಿ) ಡಿಸೆಂಬರ್ 15, 1949ರಂದು

ಸಿ) ಮಾರ್ಚ್ 10, 1950ರಂದು ಡಿ) ಮಾರ್ಚ್ 15, 1952ರಂದು

18. ವಿಶ್ವಸಂಸ್ಥೆಯ ಸಚಿವ ಸಂಪುಟ

ಎ) ಸಾಮಾನ್ಯ ಸಭೆ ಬಿ) ದತ್ತಿ ಸಮಿತಿ

**ಸಿ) ಭದ್ರತಾ ಮಂಡಳಿ** ಡಿ) ಸಚಿವಾಲಯ

19. 'ಭಾರತೀಯ ಸಂವಿಧಾನದ ಮುಖ್ಯ ವಾಸ್ತುಶಿಲ್ಪಿ'

**ಎ) ಡಾ.ಬಿ.ಆರ್ ಅಂಬೇಡ್ಕರ್** ಬಿ) ಡಾ. ಬಾಬು ರಾಜೇಂದ್ರ ಪ್ರಸಾದ್

ಸಿ) ಜವಹಾರಲಾಲ್ ನೆಹರು ಡಿ) ಮಹಾತ್ಮ ಗಾಂಧಿ

20. 'ದಿ ರಿಪಬ್ಲಿಕ್' ಎಂಬ ಪುಸ್ತಕವನ್ನು ಬರೆದವರು

ಎ) ಅರಿಸ್ಟಾಟಲ್ **ಬಿ) ಪ್ಲೇಟೋ**

ಸಿ) ಕಾರ್ಲ್ ಮಾರ್ಕ್ಸ್ ಡಿ) ಆಗಸ್ಟ್ ಕಾಮ್ಟೆ

21. ಕರ್ನಾಟಕ ರಾಜ್ಯ ರೈತ ಸಂಘವನ್ನು ಸ್ಥಾಪಿಸಿದವರು

ಎ) ರುದ್ರಪ್ಪ ಬಿ) ಬಸವಲಿಂಗಪ್ಪ

**ಸಿ) ಎಂ.ಡಿ ನಂಜುಂಡಸ್ವಾಮಿ** ಡಿ) ಎನ್.ಡಿ ಸುಂದರೇಶ್

22. ಬಾಲ್ಯ ವಿವಾಹ ನಿಷೇಧ ಕಾಯ್ದೆಯನ್ನು ಅಂಗೀಕರಿಸಲಾದ ವರ್ಷ

**ಎ) 2006** ಬಿ) 2007

ಸಿ) 2008 ಡಿ) 2009

23. ಪೂರ್ವ ಘಟ್ಟದಲ್ಲಿನ ಅತ್ಯಂತ ಎತ್ತರದ ಶಿಖರ

ಎ) ಅಣ್ಣೈ ಮುಡಿ

**ಬಿ) ಆರ್ಮಕೊಂಡ**

ಸಿ) ಗುರುಶಿಖರ

ಡಿ) ನೀಲಗಿರಿ

24. ಕಾರ್ಗಿಲ್ ನ ಬಳಿಯ ಡ್ರಾಸ್ ಪ್ರಖ್ಯಾತವಾಗಿರುವುದು

ಎ) ಭಾರತದಲ್ಲಿ ಅತ್ಯಂತ ಕಡಿಮೆ ಮಳೆ ಪಡೆಯುವುದಕ್ಕೆ

ಬಿ) ಭಾರತದಲ್ಲಿ ಅತ್ಯಂತ ಹೆಚ್ಚಿನ ಉಷ್ಣಾಂಶ ಹೊಂದಿರುವುದಕ್ಕೆ

**ಸಿ) ಭಾರತದಲ್ಲಿ ಅತ್ಯಂತ ಕಡಿಮೆ ಉಷ್ಣಾಂಶ ಹೊಂದಿರುವುದಕ್ಕೆ**

ಡಿ) ಭಾರತದಲ್ಲಿ ಅತ್ಯಂತ ಹೆಚ್ಚು ಮಳೆ ಪಡೆಯುವುದಕ್ಕೆ

25. ಕಪ್ಪು ಮಣ್ಣು ಉತ್ಪತ್ತಿಯಾಗಿರುವುದು

ಎ) ಸ್ಫಟಿಕ ಶಿಲೆಗಳಿಂದ

**ಬಿ) ಬಸಾಲ್ಟ್ ಶಿಲೆಗಳಿಂದ**

ಸಿ) ಗ್ರಾನೈಟ್ ನಿಂದ

ಡಿ) ಕಲ್ಲಿದ್ದಲಿನಿಂದ

26. ಬಿಳಿಲು ಬೇರುಗಳನ್ನು ಹೊಂದಿರುವ ಮರಗಳ ಕಾಡು

ಎ) ನಿತ್ಯ ಹರಿದ್ವರ್ಣ ಕಾಡುಗಳು

ಬಿ) ಉಷ್ಣವಲಯದ ಎಲೆ ಉದುರುವ ಕಾಡುಗಳು

ಸಿ) ಪರ್ವತ ಕಾಡುಗಳು

**ಡಿ) ಮ್ಯಾಂಗ್ರೋವ್ ಕಾಡುಗಳು**

27. ಇವುಗಳಲ್ಲಿ ಪರ್ಯಾಯ ಪ್ರಸ್ಥಭೂಮಿಯ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳು

ಎ) ಮಹಾನದಿ ಮತ್ತು ಕೃಷ್ಣ

ಬಿ) ತುಂಗಾ ಮತ್ತು ಭದ್ರಾ

**ಸಿ) ನರ್ಮದಾ ಮತ್ತು ತಾಪಿ**

ಡಿ) ಕಾವೇರಿ ಮತ್ತು ಪಾಲರ್

28. ವರ್ಗಾವಣೆ ಬೇಸಾಯ ಮತ್ತು ಸ್ಥಿರ ಬೇಸಾಯದ ವಿಧಗಳು ಇರುವುದು

ಎ) ವಾಣಿಜ್ಯ ಬೇಸಾಯದಲ್ಲಿ

ಬಿ) ಸಾಂದ್ರ ಬೇಸಾಯದಲ್ಲಿ

ಸಿ) ನೀರಾವರಿ ಬೇಸಾಯದಲ್ಲಿ

**ಡಿ) ಜೀವನಾಧಾರಿತ ಬೇಸಾಯದಲ್ಲಿ**

29. ಭಾರತದ ಹೆಬ್ಬಾಗಿಲು

ಎ) ದೆಹಲಿ

ಬಿ) ಚೆನ್ನೈ

ಸಿ) ಕಲ್ಕತ್ತಾ

**ಡಿ) ಮುಂಬೈ**

30. ಈ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳಲ್ಲಿ ಖಾಸಗಿ ಸ್ವಾಮ್ಯದ್ದು

**ಎ) ಇಸ್ಪಾತ್ ಉಕ್ಕಿನ ಕಾರ್ಖಾನೆ**

ಬಿ) ಬೊಕಾರೊ ಉಕ್ಕಿನ ಕಾರ್ಖಾನೆ

ಸಿ) ಬಿಲಾಯಿ ಉಕ್ಕಿನ ಕಾರ್ಖಾನೆ

ಡಿ) ಸೇಲಂ ಉಕ್ಕಿನ ಕಾರ್ಖಾನೆ

31. ಇವುಗಳಲ್ಲಿ ಕಡಲ್ಕೊರೆತವನ್ನು ತಡೆಗಟ್ಟುವ ಒಂದು ವಿಧಾನ

ಎ) ನದಿಗಳಿಗೆ ಅಡ್ಡಲಾಗಿ ಅಣೆಕಟ್ಟುಗಳನ್ನು ಕಟ್ಟುವುದು

**ಬಿ) ತೀರಗಳಲ್ಲಿ ಮರಳಿನ ಗಣಿಗಾರಿಕೆಯನ್ನು ತಡೆಯುವುದು**

ಸಿ) ದೊಡ್ಡ ದೊಡ್ಡ ಅಣೆಕಟ್ಟೆ ಮತ್ತು ರಿಸರ್ವಾಯರ್ ಗಳನ್ನು ನಿರ್ಮಾಣಗಳನ್ನು ತಡೆಯುವುದು

ಡಿ) ಎತ್ತರದ ವಸತಿ ಕಟ್ಟಡಗಳನ್ನು ನಿರ್ಮಿಸುವುದು

32. ಭಾರತದಲ್ಲೇ ಅತ್ಯಂತ ಹಳೆಯ ಮತ್ತು ಈಗಲೂ ಚಾಲ್ತಿಯಲ್ಲಿರುವ ವೃತ್ತಪತ್ರಿಕೆ

**ಎ) ಬಾಂಬೆ ಸಮಾಚಾರ** ಬಿ) ಮಂಗಳೂರು ಸಮಾಚಾರ

ಸಿ) ಬೆಂಗಳೂರು ಸಮಾಚಾರ ಡಿ) ಮೈಸೂರು ಸಮಾಚಾರ

33. ಕೇಂದ್ರಾಡಳಿತ ಪ್ರದೇಶದಲ್ಲಿರುವ ಪ್ರಮುಖ ಬಂದರು

ಎ) ಕಲ್ಕತ್ತಾ ಬಿ) ವಿಶಾಖಪಟ್ಟಣ

ಸಿ) ಎನ್ನೋರ **ಡಿ) ಪೋರ್ಟ್ ಬ್ಲೇರ್**

34. ರಾಷ್ಟ್ರೀಯ ಆದಾಯವನ್ನು ಒಟ್ಟು ಜನಸಂಖ್ಯೆಯಿಂದ ಭಾಗಿಸಿದಾಗ ಬರುವ ಮೊತ್ತವೇ

ಎ) ಒಟ್ಟು ರಾಷ್ಟ್ರೀಯ ಆದಾಯ **ಬಿ) ತಲಾ ಆದಾಯ**

ಸಿ) ಜೀವನಮಟ್ಟ ಡಿ) ಜೀವಿತ ಅವಧಿ

35. ಆಶ್ರಯ ಯೋಜನೆಯನ್ನು ಜಾರಿಗೆ ತಂದಿರುವ ಉದ್ದೇಶ

ಎ) ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸುವುದು **ಬಿ) ವಸತಿಹೀನರಿಗೆ ಮನೆ ಒದಗಿಸುವುದು**

ಸಿ) ಕೃಷಿ ಭೂಮಿ ಇಲ್ಲದವರಿಗೆ ಭೂಮಿಯನ್ನು ಒದಗಿಸುವುದು ಡಿ) ಅನಕ್ಷರಸ್ಥರಿಗೆ ಶಾಲೆಗಳನ್ನು ಸ್ಥಾಪಿಸುವುದು

36. ದೇಶದಾದ್ಯಂತ ಒಂದೇ ತೆರೆನಾದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಜಾರಿಗೆ ತಂದ ಸಂವಿಧಾನದ ತಿದ್ದುಪಡಿ

**ಎ) 1993 ರ 73ನೇ ತಿದ್ದುಪಡಿ** ಬಿ) 1963 ರ 63ನೇ ತಿದ್ದುಪಡಿ

ಸಿ) 1953 ರ 53ನೇ ತಿದ್ದುಪಡಿ ಡಿ) 1973 ರ 43ನೇ ತಿದ್ದುಪಡಿ

37. ಬ್ಯಾಂಕ್ ಖಾತೆದಾರನು ಒಂದು ದಿನದಲ್ಲಿ ಎಷ್ಟು ಬಾರಿಯಾದರೂ ಹಣವನ್ನು ಜಮಾ ಮಾಡುವ ಮತ್ತು ಹಿಂಪಡೆಯುವ ಅವಕಾಶ ಹೊಂದಿರುವ ಖಾತೆ

ಎ) ಉಳಿತಾಯ ಖಾತೆ **ಬಿ) ಚಾಲ್ತಿ ಖಾತೆ**

ಸಿ) ಆವರ್ತ ಠೇವಣಿ ಖಾತೆ ಡಿ) ನಿಶ್ಚಿತ ಠೇವಣಿ ಖಾತೆ

38. ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ನೀಡುವುದು

**ಎ) ಅಂಚೆ ಕಛೇರಿ**

ಬಿ) ಭಾರತೀಯ ಸ್ಟೇಟ್ ಬ್ಯಾಂಕ್

ಸಿ) ಭಾರತೀಯ ರಿಜರ್ವ ಬ್ಯಾಂಕ್

ಡಿ) ಭೂ ಅಭಿವೃದ್ಧಿ ಬ್ಯಾಂಕ್

39. ವಿಶ್ವ ಗ್ರಾಹಕ ದಿನಾಚರಣೆಯನ್ನು ಪ್ರತಿವರ್ಷ ಆಚರಿಸುವುದು

**ಎ) 15ನೇ ಮಾರ್ಚ್ ರಂದು**

ಬಿ) 14ನೇ ಫೆಬ್ರವರಿ ರಂದು

ಸಿ) 14ನೇ ನವಂಬರ್ ರಂದು

ಡಿ) 15ನೇ ಆಗಸ್ಟ್ ರಂದು

40. ಗ್ರಾಹಕ ರಕ್ಷಣಾ ಕಾಯ್ದೆ ಭಾರತದಲ್ಲಿ ಜಾರಿಗೆ ಬಂದ ವರ್ಷ

ಎ) 1962

ಬಿ) 1972

**ಸಿ) 1986**

ಡಿ) 1996